O.S **175/2023**

P.W.1

ಸಾಕ್ಷಿಯನ್ನು ದಿಃ 23-06-2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ ಶ್ರೀಮತಿ.ಯು.ವಿ.ಬಿ. ವಕೀಲರಿಂದ ವಾದಿ ಪರವಾಗಿ:-**

ನಾನು ನನ್ನ ಮೌಖಿಕ ಸಾಕ್ಷಿಯನ್ನು ಶಪಥ ಪತ್ರದ ರೂಪದಲ್ಲಿ ಈಗ ನ್ಯಾಯಾಲಯದಲ್ಲಿ ಸಲ್ಲಿಸುತ್ತಿದ್ದೇನೆ. ಸದರಿ ಶಪಥ ಪತ್ರದಲ್ಲಿ ಇರುವ ಸಂಗತಿಗಳನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ ಆ ಕಾರಣ ಅವುಗಳಲ್ಲಿಯ ಅಂಶಗಳು ನಿಜವಿರುತ್ತದೆ. ಸದರಿ ಅಂಶಗಳನ್ನು ಓದಿಸಿ ತಿಳಿದುಕೊಂಡ ಮೇಲೆ ಒಪ್ಪಿ ನನ್ನ ಸಹಿ ಮಾಡಿರುತ್ತೇನೆ.

ನಾನು ಹಾಜರುಪಡಿಸಿರುವ ದಾಖಲೆಗಳನ್ನು ನೋಡುತ್ತಿದ್ದು, ಅವುಗಳಲ್ಲಿ ದಿ.19.08.2009 ರ ಸಾಲದ ಅರ್ಜಿ, ಮಂಜೂರಾತಿ ಪತ್ರ, ಸಾಲದ ಒಪ್ಪಂದ ಪತ್ರ ಅಡಮಾನು ಪತ್ರ ಕ್ರಮವಾಗಿ ನಿಪಿ1 ರಿಂದ 4 ಎಂದು, 5 ಪುನರುಜ್ಜೀವನ ಪತ್ರಗಳನ್ನು (ಎ.ಓ.ಡಿ) (Revival Letter) ಕ್ರಮವಾಗಿ ನಿಪಿ.6 ರಿಂದ 10 ಎಂದು,ಸರ್ವೆ ನಂ. 68/1 ಎ+1 ಬಿ ಮತ್ತು 1 ಸಿ+1 ಡಿ, 68/5, 67/4 ನಾಲ್ಕು ಪಹಣಿ ಪತ್ರಿಕೆಗಳನ್ನು ಕ್ರಮವಾಗಿ ನಿಪಿ-11 ರಿಂದ 14 ಎಂದು, ಎಮ್ ಆರ್ ನಂ. ಎಚ್ 50/2015-16 ನ್ನು ನಿಪಿ-15 ಎಂದು, ಪ್ರತಿವಾದಿಯ ಖಾತೆಯ ಸ್ಟೇಟಮೆಂಟಿನ ಪ್ರತಿಯನ್ನು ನಿಪಿ.16 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಏಕಪಕ್ಷಿಯವಾದ ಕಾರಣ ಪಾಟೀ ಸವಾಲು ಇರುವುದಿಲ್ಲ.)

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

sd/-23.06.2026

ಹಿರಿಯ ದಿವಾಣಿ ನ್ಯಾಯಾಧೀಶರು

ಸಾಕ್ಷಿದಾರರ ಸಹಿಃ sd/-

ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ